**ದಿನಾಂಕ: 23-06-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 5ನೇ ಪ್ರತಿವಾದಿ ಪರ ಶ್ರೀ ಜೆ.ವಿ.ಹೆಚ್. ವಕೀಲರಿಂದ**

1. ನನ್ನ ಮುತ್ಯನ ಹೆಸರು ಧ್ಯಾವಪ್ಪ. ಧ್ಯಾವಪ್ಪನ ತಂದೆ ಹೆಸರು ಗೊತ್ತಿಲ್ಲ. ದಾವಾದ ಆಸ್ತಿ ಯಾವತ್ತಾದರೂ ಧ್ಯಾವಪ್ಪನ ಹೆಸರಿನಲ್ಲಿ ಇರುವ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಧ್ಯಾವಪ್ಪನ ತಂದೆಯ ಹೆಸರಿನಲ್ಲಿರುವ ಯಾವುದಾದರೂ ದಾಖಲೆ ಹಾಜರುಪಡಿದ್ದೀರಾ ಎಂದರೆ ಯಾವುದೇ ಆಸ್ತಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿಗಳು ಅಜ್ಜಮುತ್ಯನ ಆಸ್ತಿಗಳು ಅಲ್ಲ. ದಾವಾದ ಆಸ್ತಿಗಳು ನಿಮ್ಮ ತಂದೆ ಜೀವಂತ ಇರುವಾಗಲೇ ಎಲ್ಲರ ಹೆಸರಿನಲ್ಲಿ ಪಹಣಿಗಳು ಆಗಿವೆ ಎಂದರೆ ಸರಿ. ಪಹಣಿಗಳ ಪ್ರಕಾರ ಅವರವರೇ ಕಬ್ಜೆಯಲ್ಲಿ ಇದ್ದಾರೆ ಎಂದರೆ ಉಣ್ಣಲು ಪಹಣಿ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ಕೊಟ್ಟ ನಂತರ ಅವರು ಕಬ್ಜೆಯಲ್ಲಿ ಇದ್ದು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಈ ರೀತಿ ಪಹಣಿಗಳು ಆಗಿ 30 ರಿಂದ 35 ವರ್ಷಗಳವಾಗಿವೆ ಎಂದರೆ ಸರಿ. ನಿಮ್ಮ ತಂದೆ ತೀರಿಕೊಳ್ಳುವ ಸಮಯದಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಇದ್ದವು ಎಂದು ಉತ್ತರಿಸುತ್ತಾರೆ. ಯಾವ ಸರ್ವೆ ನಂಬರ್ ಎಂದರೆ 389 ಆಗಿದೆ ಎಂದು ಉತ್ತರಿಸುತ್ತಾರೆ.

2. ಸ.ನಂ.389 ಜಮೀನು 2ನೇ ಪ್ರತಿವಾದಿ ಮಹಾಂತಪ್ಪನು 2006 ರಲ್ಲಿ 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಗೊತ್ತಿಲ್ಲದೇ ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. ಆ ಪತ್ರಕ್ಕೆ 3ನೇ ಪ್ರತಿವಾದಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದ ಮೂರು ಜನ ಕಲೆತು ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. ಸ.ನಂ.389ರ ಲ್ಲಿ 4 ಎಕರೆ ಜಮೀನನ್ನು 1ನೇ ಪ್ರತಿವಾದಿಯು 5ನೇ ಪ್ರತಿವಾದಿಗೆ ಮಾರಾರಿದ್ದಾರೆ ಎಂದರೆ ತಾಯಿ ಮಕ್ಕಳು ಕಲೆತು ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಪತ್ರಕ್ಕೆ 1 ರಿಂದ 4ನೇ ಪ್ರತಿವಾದಿಯರು ಸಹಿ ಮಾಡಿದ್ದಾರೆ ಎಂದರೆ ನಮಗೆ ಗೊತ್ತಾಗದೇ ಮಾರಿದ್ದಾರೆ ಎಂದು

ಉತ್ತರಿಸುತ್ತಾರೆ. 1ನೇ ಪ್ರತಿವಾದಿಯು ನನ್ನ ಹತ್ತಿರ ಇರುತ್ತಾರೆ. ಸದರಿ ಪತ್ರದ ಪ್ರಕಾರ 8 ಎಕರೆ ಜಮೀನು 5ನೇ ಪ್ರತಿವಾದಿ ಹೆಸರಿಗೆ ಪಹಣಿ ಬಂದಿದೆ ಎಂದರೆ ನಮಗೆ ಗೊತ್ತಿಲ್ಲದೇ ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ಪಹಣಿಗಳು 2006 ರಿಂದ ಬಂದಿದೆ ಮತ್ತು ಮುಟೆಷನ್ ಆಗಿದೆ ಅದರ ಪ್ರಕಾರ 5ನೇ ಪ್ರತಿವಾದಿಯು ಸದರಿ ಹೊಲವನ್ನು ಬಿತ್ತುವುದು ಬೆಳೆಯುವುದು ಮಾಡುತ್ತಾರೆ ಎಂದರೆ ಸರಿ. ಆ ರೀತಿ 5ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ಬಂದಿರುವುದನ್ನು ನೀವಾಗಲೀ ನಿಮ್ಮ ಕುಟುಂಬದ ಸದಸ್ಯರಾಗಲೀ ಎಲ್ಲಿಯೂ ಕೇಸ್ ಮಾಡಿಲ್ಲ ಎಂದರೆ ಈಗ ಗೊತ್ತಾಗಿ ಈ ಕೇಸ್ ಮಾಡಿರುತ್ತೇವೆ ಬೇರೆ ಕಡೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ.

3. 5ನೇ ಪ್ರತಿವಾದಿಗೆ ಮಾರಾಟ ಮಾಡಿದ ಪ್ರಕಾರ ಅದರ ಹಣ 1 ರಿಂದ 4ನೇ ಪ್ರತಿವಾದಿಯರಿಗೆ ಮುಟ್ಟಿದೆ ಎಂದರೆ ನಮಗೆ ಗೊತ್ತಿಲ್ಲದೇ ಮಾರಿದ್ದಾರೆ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿಯ ಜೊತೆಯಲ್ಲಿ ಉಪಜೀವನಕ್ಕಾಗಿ ಕೇಸ್ ಮಾಡಿದ್ದೀರಿ ಎಂದರೆ ಸರಿ. 4ನೇ ಪ್ರತಿವಾದಿಯು ಸದರಿ ಕೇಸಿನಲ್ಲಿ ಆದೇಶದ ಪ್ರಕಾರ ಹಣ ಕಟ್ಟಿದ್ದಾನೆ ಎಂದರೆ 2 ಮತ್ತು 4ನೇ ಪ್ರತಿವಾದಿಯರು ತಲಾ 30 ಸಾವಿರ ಕಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

4. ನನ್ನ ಮದುವೆಯಾಗಿ 34 ವರ್ಷ ಆಗಿರುತ್ತದೆ. 2ನೇ ವಾದಿಯ ಮದುವೆಯು ನನಗಿಂತ ಮೊದಲು ಆಗಿರುತ್ತದೆ. ನೀವು ಮದುವೆಯಾದ ನಂತರ ಕೊಟ್ಟ ಮನೆಯಲ್ಲಿ ಇದ್ದೀರಿ ಎಂದರೆ ಸರಿ. ನೀವು ಗಂಡನ ಮನೆಗಳಿಗೆ ಹೋದ ನಂತರ ದಾವಾದ ಹೊಲದಲ್ಲಿ ಬಿತ್ತುವುದು ಬೆಳೆಯುವುದು ಮಾಡಿಲ್ಲ ಎಂದರೆ ಅವರು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ತಂದೆ ಇರುವಾಗ ಪಾಲು ಕೇಳಿಲ್ಲ ಎಂದರೆ ಕೇಳಿದ್ದೇವೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತೀರಿಕೊಂಡು 30 ವರ್ಷ ಮೇಲೆ ಆಗಿದೆ ಎಂದರೆ 22 ವರ್ಷ ಎಂದು ಉತ್ತರಿಸುತ್ತಾರೆ.

5. ಎಲ್ಲಾ ದಾವಾದ ಆಸ್ತಿಗಳಿಗೆ ಭಾಗಗಳಾಗಿ 30 ವರ್ಷ ಆಗಿದೆ ಎಂದರೆ ಅವರು ಬೇರೆ ಆಗಿ 24 ವರ್ಷ ಆಗಿವೆ ಎಂದು ಉತ್ತರಿಸುತ್ತಾರೆ. ಆ ರೀತಿ ಭಾಗ ಆಗಿರುವ ಬಗ್ಗೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಕೊಡುತ್ತೇನೆ ಎಂದು ಹೇಳಿದ್ದಕ್ಕೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ದಾವಾದ ಆಸ್ತಿ ಹಿರಿಯರ ಆಸ್ತಿ ಅಲ್ಲ ಆದ್ದರಿಂದ ನಿಮಗೆ ಭಾಗ ಕೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಯರು ಮಾರಾಟ ಮಾಡಿದಂತಹ ಪತ್ರಕ್ಕೆ 3 ಮತ್ತು 4ನೇ ಪ್ರತಿವಾದಿಯರು ಒಪ್ಪಿಗೆ ಕೊಟ್ಟಿದ್ದರಿಂದ ಸದರಿ ಮಾರಾಟ ಪತ್ರವನ್ನು ಪ್ರಶ್ನಿಸುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ